ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳು ಕಾರ್ಯಾಲಯ, ಬಳ್ಳಾರಿ ಜಿಲ್ಲೆ, ಬಳ್ಳಾರಿ-583101

OFFICE OF THE DEPUTY COMMISSIONER AND DISTRICT MAGISTRATE, BELLARY DISTRICT, BELLARY-583101

Telephone : 08392-277100. Fax : 08392-272538 Email:dcbellary@gmail.com

ಸಂ/ಕಂ/ಸಿಬ್ಬಂದಿ-2/100/2017-18 ದಿನಾಂಕ: 10-9-2018

**:: ನೋಟಿಸು ::**

**ವಿಷಯ:** ಬಳ್ಳಾರಿ ಜಿಲ್ಲೆಯಲ್ಲಿ ಖಾಲಿ ಇರುವ 38 ಗ್ರಾಮಲೆಕ್ಕಿಗರ ಹುದ್ದೆಗಳನ್ನು ಭರ್ತಿ ಮಾಡುವ ಕುರಿತು ಪರಿಶೀಲನಾ ಪಟ್ಟಿಯಲ್ಲಿರುವ ಅಭ್ಯರ್ಥಿಗಳು ಮೂಲ ದಾಖಲಾತಿಗಳೊಂದಿಗೆ ಹಾಜರಾಗುವ ಬಗ್ಗೆ.

**ಉಲ್ಲೇಖ:**1)ಈ ಕಾರ್ಯಾಲಯದ ಅಧಿಸೂಚನೆ ಸಂಖ್ಯೆ: ಕಂ: ಸಿಬ್ಬಂದಿ-2/100/2017-18 ದಿನಾಂಕ:24-3-2018 ಹಾಗೂ ತಿದ್ದುಪಡಿ ಅಧಿಸೂಚನೆ ದಿ:9.7.2018 & 16.8.2018.

2) ಈ ಕಚೇರಿ ಪ್ರಕಟಣೆ ದಿನಾಂಕ:26-10-2018.

*****

ಬಳ್ಳಾರಿ ಜಿಲ್ಲೆಯಲ್ಲಿ ಖಾಲಿ ಇರುವ 38 ಗ್ರಾಮ ಲೆಕ್ಕಿಗರ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ಉಲ್ಲೇಖಿತ ದಿನಾಂಕ:10.09.2018ರ ಮೂಲಕ ಪರಿಶೀಲನಾ ಪಟ್ಟಿಯನ್ನು ಬಳ್ಳಾರಿ ವೆಬ್ ಸೈಟ್ **http://ballari.nic.in** / **http://bellary.nic.in** ನಲ್ಲಿ ಪ್ರಚುರ ಪಡಿಸಲಾಗಿದೆ. ಪ್ರಯುಕ್ತ ಈ ಕೆಳಕಂಡ ಮೂಲ ಹಾಗೂ ಒಂದು ಸೆಟ್ ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಲ್ಪಟ್ಟ ನಕಲು ಪ್ರತಿಯೊಂದಿಗೆ ಖುದ್ದಾಗಿ ಜಿಲ್ಲಾಧಿಕಾರಿಗಳ ಕಚೇರಿ, ಬಳ್ಳಾರಿ ಇಲ್ಲಿ ದಿ:04-10-2018 ರಂದು ಸಮಯ ಬೆಳಿಗ್ಗೆ 10.30 ಗಂಟೆಗೆ ಹಾಜರಾಗತಕ್ಕದ್ದು. ಒಂದು ವೇಳೆ ಗೈರು ಹಾಜರಾದಲ್ಲಿ ಅದಕ್ಕೆ ನಿಮ್ಮನ್ನೇ ವೈಯಕ್ತಿಕ ಹೊಣೆಗಾರರೆಂದು ಪರಿಗಣಿಸಿ, ನಿಮ್ಮ ಹೆಸರನ್ನು ನೇಮಕಾತಿ ಪ್ರಕ್ರಿಯೆಯಿಂದ ಕೈಬಿಟ್ಟು ಮುಂದಿನ ಅಭ್ಯರ್ಥಿಗೆ ಅವಕಾಶ ನೀಡಲಾಗುವುದು.

1) ಎಸ್.ಎಸ್.ಎಲ್.ಸಿ. ಅಂಕಪಟ್ಟಿ
2) ಎಸ್.ಎಸ್.ಎಲ್.ಸಿ. ವರ್ಗಾವಣೆ ಪ್ರತಿ
3) ಪಿ.ಯು.ಸಿ./ಸಿ.ಬಿ.ಎಸ್.ಎಸ್./ಐ.ಸಿ.ಎಸ್.ಸಿ. ಅಂಕಪಟ್ಟಿ
4) ಮೂಲ ಜಾತಿ ಮತ್ತು ಆದಾಯ ಪ್ರಮಾಣ ಪತ್ರ (ಎಸ್.ಸಿ./ಎಸ್.ಟಿ./ಪ್ರವರ್ಗ1/ಪ್ರವರ್ಗ-2ಎ/ಪ್ರವರ್ಗ-2ಬಿ/ಪ್ರವರ್ಗ3ಎ/ಪ್ರವರ್ಗ-3ಬಿ)
5) ಮೂಲ ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ)
6) ಮೂಲ ಯೋಜನಾ ನಿರಾಶ್ರಿತ ಅಭ್ಯರ್ಥಿ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ)
7) ಮಾಜಿ ಸೈನಿಕರ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ)
8) ಮೂಲ ಕನ್ನಡ ಮಾಧ್ಯಮ ಅಭ್ಯರ್ಥಿ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ)
9) ಅಂಗವಿಕಲರ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ)
10) ಹೈ-ಕ ಮೀಸಲಾತಿ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ)
11) ಮೂಲ ಬ್ಯಾಂಕ್ ಚಲನ್ ಪ್ರತಿ
12) ಇತ್ತೀಚಿನ (02) ಪಾಸ್‌ಪೋರ್ಟ್ ಸೈಜಿನ ಭಾವಚಿತ್ರಗಳು
13) ಇತರೆ ಮೂಲ ಪ್ರಮಾಣ ಪತ್ರಗಳು

**ಷರತ್ತುಗಳು:**

1) ಪರಿಶೀಲನೆಗೆ ಹಾಜರ್ ಆಗುವ ಅಭ್ಯರ್ಥಿಗಳಿಗೆ ಯಾವುದೇ ಭತ್ಯೆಯನ್ನು ನೀಡುವುದಿಲ್ಲ.
2) ಪರಿಶೀಲನೆಯಾದಿಯು (Verification List) ಅಭ್ಯರ್ಥಿಗಳ ಮೂಲ ದಾಖಲೆಗಳ ಪರಿಶೀಲನೆಯಾದಿ ಆಗಿರುತ್ತದೆ.
3) ಪರಿಶೀಲನೆಗೆ ಹಾಜರ್ ಹಾಗುವ ಅಭ್ಯರ್ಥಿಗಳು ಆಯ್ಕೆಯನ್ನು ಹಕ್ಕು ಎಂದು ಪರಿಗಣಿಸುವಂತಿಲ್ಲ.
4) ಅಭ್ಯರ್ಥಿಗಳ ಮೂಲ ದಾಖಲೆಗಳಲ್ಲಿ ಯಾವುದೇ ವ್ಯತ್ಯಾಸ ಕಂಡುಬಂದಲ್ಲಿ ಆಯ್ಕೆ ಸಮಿತಿಯ ತೀರ್ಮಾನವೇ ಅಂತಿಮವಾಗಿರುತ್ತದೆ.
5) ನೇಮಕಾತಿ ಆಯ್ಕೆ Merit cum Roster ಆಧಾರದ ಮೇರೆಗೆ ಮಾತ್ರ ಪಾರದರ್ಶಕ ರೀತಿಯಲ್ಲಿ ನಡೆಸಲಾಗುತ್ತದೆ.

10/9/18

**ಜಿಲ್ಲಾಧಿಕಾರಿಗಳು**
**ಹಾಗೂ ಗ್ರಾಮಲೆಕ್ಕಿಗರ ನೇಮಕಾತಿ ಆಯ್ಕೆ ಪ್ರಾಧಿಕಾರ**
**ಬಳ್ಳಾರಿ ಜಿಲ್ಲೆ, ಬಳ್ಳಾರಿ.**

ಗೆ,

ತಾತ್ಕಾಲಿಕ ಪರಿಶೀಲನಾ ಪಟ್ಟಿಯಲ್ಲಿರುವ ಅಭ್ಯರ್ಥಿಗಳಿಗೆ